

# ಏಕಬಂಡೆಯ ಬತ್ತೇರಿ



■ ಚಿತ್ರ– ಬರಹ: **ಸುರೇಶ್ ಕುಮಾರ್.ಜಿ.**

ಶಿವಮೊಗ್ಗ –ಹೊಸನಗರ–ಕೊಲ್ಲೂರು ಮಾರ್ಗವಾಗಿ ಹೊಸನಗರದ ಕಾರಣಗಿರಿಯಿಂದ ಮೂರು ಕಿ.ಮೀ. ಪ್ರಯಾಣದ ನಂತರ ಎಡಕ್ಕೆ ತಿರುಗಿದರೆ ಬರೆಕಲ್ಲು – ಬತ್ತೇರಿಗೆ ಚಾರಣದ ರಸ್ತೆ ಪ್ರಾರಂಭವಾಗುತ್ತದೆ. ಬರೆಕಲ್ಲು – ಬತ್ತೇರಿ 4 ರಿಂದ 5 ಕಿ.ಮೀ.ವರೆಗೆ ಏಕಬಂಡೆಯ ಮೇಲಿರುವ ಪ್ರದೇಶವಾಗಿದ್ದು, ಇದು ದಟ್ಟ ಅರಣ್ಯ ಪ್ರದೇಶದಿಂದ ಕೂಡಿದೆ.

ಹೋಗಿ ಬರಲು ಸುಮಾರು 12 ಕಿ.ಮೀ.ನಷ್ಟಿದ್ದು, ಚಾರಣದ ಕೊನೆಯ ಭಾಗದಲ್ಲಿ ಕೆಳದಿ ಸಂಸ್ಥಾನದ ಒಂದು ಕೋಟೆಯಿದೆ. ತಪ್ಪು ಮಾಡಿದವರಿಗೆ ಕೋಟೆಯ ಮೇಲಿನಿಂದ ತಳ್ಳುವ ಶಿಕ್ಷೆ ವಿಧಿಸಲಾಗುತ್ತಿತ್ತು ಎಂದೇ ಪ್ರತೀತಿ ಇದೆ.

30 ಸದಸ್ಯರನ್ನು ಒಳಗೊಂಡ ನಮ್ಮ ತಂಡವು ಶಿವಮೊಗ್ಗದಿಂದ ಬೆಳಗ್ಗೆ 7 ಗಂಟೆಗೆ ಹೊರಟಿತು. ಬೆಳಿಗ್ಗೆ 8.30ಕ್ಕೆ ಕಾರಣಗಿರಿಯಿಂದ ಸುಮಾರು ಕಿ.ಮಿ. ದೂರದ ಒಂದು ಹಳ್ಳಿಯಲ್ಲಿ ನಮಗೆ ಉಪಹಾರ ಮತ್ತು ಮಧ್ಯಾಹ್ನದ ಊಟ ವ್ಯವಸ್ಥೆ. ಮಲೆನಾಡು ಶೈಲಿಯ ಕಡಬು ಮತ್ತು ಅವಲಕ್ಕಿ ನಮ್ಮ ಬೆಳಗಿನ ಉಪಹಾರ. ನಡೆದಾಡುವವರಿಗೆ ಹೊಟ್ಟೆ ಗಟ್ಟಿಯಾಗಲು ಅವಲಕ್ಕಿಯೇ ಒಳ್ಳೆಯದು. ಚಾರಣ ಆರಂಭಿಸಿ ಕೊನೆಯ ಕೋಟೆಯ ತುದಿಗೆ ತಲುಪಿದಾಗ ಮಧ್ಯಾಹ್ನ 1.30 ಗಂಟೆ.

ಶರಾವತಿ ಹಿನ್ನೀರು ಪ್ರದೇಶಕ್ಕೂ ಭೇಟಿ ನೀಡಿದೆವು. ಶರಾವತಿ ಹಿನ್ನೀರಿನಲ್ಲಿ ಬೋಟಿಂಗ್ ಮಾಡಿದ್ದು ನಮ್ಮ ಉಲ್ಲಾಸವನ್ನು ಇನ್ನಷ್ಟು ಹೆಚ್ಚಿಸಿತು. ಕಾಡಿನ ನಡುವೆ ಗುಡ್ಡವೇರುವ ಉತ್ಸಾಹ ಇರುವವರಿಗೆ ಬರೆಕಲ್ಲು– ಬತ್ತೇರಿ ಹೇಳಿ ಮಾಡಿಸಿದ ತಾಣ. ●